
**ಅವನೂ ಹಾಗೇ!**
**ಪ್ರೀತಿಯ ಹುಡುಗನ ಹಾಗೆ**

ಈ ಕವಿತೆಗೆ ಯಾವ ವಿವರಣೆಯೂ ಬೇಕಿಲ್ಲ, ಹಾಗೇ ಅನುಭವವನ್ನು ದಾಟಿಸುತ್ತೆ. ಪದಸಂಚಾರದ ಮೂಲಕ ಸಿಗದೇ ಹೋಗುವುದನ್ನೂ ನಿಜಾರ್ಥದಲ್ಲಿ ದಕ್ಕಿಸಿಕೊಳ್ಳುವ ಕವಿತೆಗಳೂ ಇಲ್ಲಿವೆ. ಓದುಗರ ಕಣ್ಣೊಳಗೆ ಕಣ್ಣಿಡುತ್ತಾ ಅವರದೋ ಇವರದೋ ಎಂಬುದನ್ನು ಅಳಿದು ಒಂದಾಗಿಸುವ ಕವಿತೆ 'ಬರಬಾರದು ಹೀಗೆ ನೀವು'.

**ಬರಬಾರದು ಹೀಗೆ ನೀವು**
**ನವಿಲಗರಿಯೊಳಗೆ ಬಂದ**
**ನೀಲಿ ಕಣ್ಣಂತೆ**

ಎಂದು ಆರಂಭವಾಗುವ ಕವಿತೆಯಲ್ಲಿ ಇರುವ ಬರಬಾರದು ಎಂಬ ಪದ ಹೇಳೋದು- ಬರಬೇಕು ಅಂತಾನೇ. ವಚನಗಳಲ್ಲಿ ನುಡಿದಂತೆ ನಡೆಯಲು ಬಾರದು, ಭಕ್ತಿಯೆಂಬುದ ಮಾಡಬಾರದು ಎಂದು ಬರುವುದನ್ನು ಇದು ನೆನಪಿಸಿತು. ಅಲ್ಲಿಯೂ ಬಾರದು ಅಂದರೆ ಬೇಕು ಎಂದೇ ಅರ್ಥ. ಆದರೆ ಅದು ಸುಲಭವಲ್ಲ ಎಂದು ಹೇಳುತ್ತಿರುತ್ತದೆ. ಬಸವಣ್ಣ ಅದನ್ನು 'ಬಾಳ ಬಾಯಧಾರೆ' ಎನ್ನುತ್ತಾನೆ. ಅಂದರೆ ಕತ್ತಿಯ ಬಾಯಿಯ ಹರಿತ – ಅದು ಹೋಗುತ್ತ ಕೊಯ್ಯುವುದು, ಬರುತ್ತಾ ಕೊಯ್ಯುವುದು ಎಂದರ್ಥ. ಇಲ್ಲೂ ಕವಿತೆಯಲ್ಲಿ ನವಿಲಿನ ಕುಣಿತದಂತೆ ಬರಬೇಕೆಂಬುದು ಆಸೆ. ಮಾತ್ರವಲ್ಲ, "ಸುಮ್ಮನೆ ಕರಗಿ ಬಿಡಬೇಕು/ ನಿಮ್ಮಲ್ಲಿ/ ಕಡಲ ನೀರಲ್ಲಿ ನೀಲಿ ಬೆರೆತಂತೆ" ಎಂಬ ಬಯಕೆ. ಆದರೆ ಅದು ಅಷ್ಟು ಸುಲಭವಲ್ಲ. ಯಾಕೆಂದರೆ, "ಕೂಸು ಕೈ ಹಿಡಿದು ಜಗ್ಗುತ್ತದೆ/ ಕೆಲವು ಸಾರಿ ಹೀಗೆ!" - ಹೌದಲ್ಲವೇ ಮತ್ತೆ, ಬದುಕು ಕೂಡಾ ಬಾಳ ಬಾಯಧಾರೆಯೇ ಅಲ್ಲವೇ!!? ಜಗಿತ ಬಯಸುವ ಹೊತ್ತೇ ತಡೆ ಬರಬಹುದು. ಆದರೆ ಭರವಸೆ ಬಿಡುವುದಿಲ್ಲ.

'ಕ್ಲಾಸ್ಟ್ರೋಫೋಬಿಕ್' ಎಂಬ ಕವಿತೆಯಲ್ಲಿ ಬದುಕಿನ ನೋಟ ಕವಿತೆಯ ಮೈಯಾದ ಶಬ್ದಗಳ ನೋಟಗಳೆರಡೂ ಅರ್ಥಗಳಾಚೆಗೆ ಜಿಗಿದಾಗ ವಿಶಾಲ ಜಗಿತ ಸಾಧ್ಯವಾಗುತ್ತದೆ, ಸಾಧ್ಯವಾಗಬೇಕು ಎಂಬ ಧ್ವನಿ ಇದೆ. 'ನಾವಿಲ್ಲದೂರು'ವಿನಲ್ಲಿ 'ನಿಮ್ಮ ಮಾತನೆ ಆಡಿ, ನಮ್ಮ ಮಾತೆನ್ನುವಿರಿ' ಅನ್ನುತ್ತಲೇ




ಪದ ಸಂಚಾರ (ಈವರೆಗಿನ ಕವಿತೆಗಳು)
ಲೇ: ಮಮತಾ ಸಾಗರ
ಪುಟ: 240 ಬೆಲೆ: 300 ರೂ.
ಪ್ರಕಾಶನ: ಕಾವ್ಯಸಂಜೆ ಪ್ರಕಾಶನ, ಬೆಂಗಳೂರು
ಮೊಬೈಲ್: 87220 39612, 97435 31688.

'ಮರಳಿ ಬಾರೆವು ಇಲ್ಲಿ' ಎಂಬ ದಾಟುವಿಕೆ ಇದ್ದರೆ, 'ಪಾರಿಜಾತದ ಪ್ರೀತಿಯಲ್ಲಿ' "ಕನಸು ನಿಮ್ಮದು, ಅಲ್ಲಿ/ ರಾಗ ನುಡಿಸಲು ನಾವು (?)/ ಮುದ್ದಿಸಲು, ಮೋಹಿಸಲು,/ ಅರಸು ನೀವು (?)" ಅನ್ನುತ್ತಲೇ "ನಿಮ್ಮ ಕನಸು ಬಿಟ್ಟು ಆಚೆ ಬಂದಿದ್ದೇವೆ/ ತಡೆಯಲಾರಿರಿ ಇನ್ನು ಅಡ್ಡಗಟ್ಟಿ" ಎಂಬ ದಿಟ್ಟತನದ ದಾಟುವಿಕೆ ಇದೆ.

ಮಮತಾ ಕವಿತೆಗಳಿಗೆ ಕಥೆ ಹೇಳುವ ಹಂಬಲ ಕಡಿಮೆ. ಭಾವವನ್ನು ಮೀಟಿ ಗುಂಯ್‌ಗುಡಿಸಿ ಅಲ್ಲಿಗೇ ಬಿಟ್ಟು ಬಿಡುವುದು ಇಷ್ಟ. ಯಾಕೆಂದರೆ, ಅದು ಅನುರಣಿಸುವುದೇ ಆದರೆ ಓದುಗರಲ್ಲಿ ಅನುರಣಿಸಲಿ ಎಂಬಂತೆ. ಯಾವುದನ್ನೂ ಹೊರಗಿನಿಂದ ನೋಡುವುದಕ್ಕಿಂತ ಒಳಗಿನಿಂದ ನೋಡುವುದು ಮುಖ್ಯವೆನಿಸುತ್ತೆ. ಹೀಗಾಗಿ ಅವರ ಕವಿತೆ ಲೌಡ್